ನೂರಾರು ಜೋಡುಗಳನ್ನು ಜೋಡಿಸಿಟ್ಟುಕೊಂಡ ಮಹಿಳೆಯರು ನಮಗೆ ಹುಡುಕಿದರೆ ಸಿಗುತ್ತಲೇ ಇರುತ್ತಾರೆ.

ಎಷ್ಟೇ ಬೆಲೆಬಾಳುವ ಜೋಡುಗಳಿದ್ದರೂ ಅವುಗಳನ್ನು ಕಾಲಲ್ಲಿ ಹಾಕಿಕೊಳ್ಳಲೇಬೇಕು. ಅಡುಗೆಮನೆ, ದೇವರ ಕೋಣೆಗಳು ಇವುಗಳ ಪ್ರವೇಶಕ್ಕೆ ನಿಷಿದ್ಧ ತಾಣಗಳಾಗಿವೆ. ಉನ್ನತ ಅಧಿಕಾರಿಗಳ ಕಚೇರಿಗಳಿಗೂ ಜೋಡುಗಳನ್ನು ಪ್ರತಿಬಂಧಿಸಲಾಗುತ್ತದೆ. ದೇವಸ್ಥಾನಗಳಲ್ಲಂತೂ ಹೊರ ಆವರಣದಲ್ಲಿ 'ನಿಮ್ಮ ಪಾದರಕ್ಷೆಗಳನ್ನು ಇಲ್ಲಿ ಬಿಡಿರಿ' ಎಂಬ ಬೋರ್ಡ್ ಹಾಕಲಾಗಿರುತ್ತದೆ. ಈ ಬೋರ್ಡ್ ನೋಡಿದವರು ಎಚ್ಚೆತ್ತು ತಮ್ಮ ಜೋಡುಗಳನ್ನು ಬಿಟ್ಟು ಒಳಗೆ ಪ್ರವೇಶಿಸುತ್ತಾರೆ. ಇನ್ನು ಕೆಲವರು ಯಾವುದೊ ಗುಂಗಿನಲ್ಲಿ ಈ ಬೋರ್ಡ್ ನೋಡದೆ ಒಳಗೆ ಹೋದಾಗ ಅಲ್ಲಿದ್ದವರ ಹದ್ದಿನ ಕಣ್ಣು ಇವರನ್ನು ಎಚ್ಚರಿಸುತ್ತದೆ. 'ಚಪ್ಲಿ ಹೊರಗೆ ಬಿಟ್ಟ ಬರ್ರಿ' ಎಂಬ ಮಾತು ಕಿವಿಗೆ ಕಠೋರವಾಗಿ ಅಪ್ಪಳಿಸುತ್ತದೆ. ಕೆಲದಿನಗಳ ಹಿಂದೆ ನಮ್ಮ ಹಿಂದಿ ಚಿತ್ರನಟಿ ಶಿಲ್ಪಾ ಶೆಟ್ಟಿ ಒಡಿಶಾದ ಜಗನ್ನಾಥ ದೇವಾಲಯಕ್ಕೆ ಭೇಟಿ ಕೊಟ್ಟಾಗ ಕಾಲಲ್ಲಿ ಜೋಡು ಹಾಕಿಕೊಂಡೇ ದೇವರ ದರ್ಶನಕ್ಕೆ ಮುಂದಾಗಿದ್ದರಂತೆ. ಇದನ್ನು ಅಲ್ಲಿಯ ಅರ್ಚಕರು ಆಕ್ಷೇಪಿಸಿದರು. ಅದಕ್ಕೆ ಶಿಲ್ಪಾ– 'ತಾನು ದೇವರ ಮೇಲೆ ಭಯಭಕ್ತಿ ಇಟ್ಟುಕೊಂಡಿರುವುದಾಗಿಯೂ ತನ್ನಿಂದ ಅಂಥ ಅಚಾತುರ್ಯ ನಡದೇ ಇಲ್ಲವೆಂದು ಸಮಜಾಯಿಸಿ ನೀಡಿದಳಂತೆ. ಬಳಿಕ ಅರ್ಚಕರ ತಲೆ ಬಿಸಿ ತಣ್ಣಗಾಯಿತಂತೆ!

ಒಂದು ಸ್ಥಳದಲ್ಲಿ ಬಹಳ ಜನರ ಜೋಡುಗಳು ಕೂಡಿದಾಗ ಅದಲು ಬದಲು ಆಗುವುದು ಸಾಮಾನ್ಯ. ಕಾರ್ಯಕ್ರಮಕ್ಕೆ ಬರುವಾಗ ಚಪ್ಪಲಿ ತರದೇ ಇದ್ದರೂ, ಯಾವುದೊ ವಿಚಾರದ ಭರದಲ್ಲಿ ಮರೆತು ಬೇರೊಬ್ಬರ ಜೋಡು ಹಾಕಿಕೊಂಡು ಹೋಗಿ ನಂತರ ಮರಳಿಸಿದವರೂ ನಮ್ಮ ನಡುವೆ ಇದ್ದಾರೆ. ರಾತ್ರಿ ವಿದ್ಯುತ್ ಹೋದಾಗ, ಚಪ್ಪಲಿಗಳು ಬದಲಿ ಆಗಿಬಿಡುವ ಸಾಧ್ಯತೆ ಹೆಚ್ಚು. ಒಮ್ಮೆ ಹೀಗೆಯೇ ಆಯಿತು. ಸಾಹಿತ್ಯ ಕಾರ್ಯಕ್ರಮವೊಂದು ನಮ್ಮೂರಿನ ಲೈಬ್ರರಿ ಹಾಲ್‌ನಲ್ಲಿ ನಡೆಯುತ್ತಿತ್ತು. ಕಾರ್ಯಕ್ರಮ ಸಾಂಗವಾಗಿ ಮುಗಿದು ಇನ್ನೇನು ಎಲ್ಲರೂ ಏಳುವಷ್ಟರಲ್ಲಿ ವಿದ್ಯುತ್ ಹೋಯಿತು. ಎಲ್ಲರೂ ಹೊರಬಂದು ತಮ್ಮ ಜೋಡುಗಳನ್ನು ಬಿಟ್ಟಿದ್ದ ಸ್ಥಳ ತಡಕಾಡಿದರು. ಮೊಬೈಲ್‌ನ ಅಲ್ಪ ಬೆಳಕಿನಲ್ಲಿ ತಮ್ಮ ಜೋಡುಗಳನ್ನು ಹುಡುಕಿ, ಹಾಕಿಕೊಂಡು ಅಲ್ಲಿಂದ ನಿರ್ಗಮಿಸಿದರು. ಗ್ರಂಥಪಾಲಕ ಮಿತ್ರ ಕಲ್ಲೇಶಿ ಲೈಬ್ರರಿ ಬಂದ್ ಮಾಡಿ ಊರಿಗೆ ಹೋದರು. ಮರುದಿನ ಕಲ್ಲೇಶಿ ಮತ್ತು ನಾನು ನಿನ್ನೆ ನಡೆದ ಕಾರ್ಯಕ್ರಮದ ಕುರಿತಾಗಿ ಮಾತನಾಡುತ್ತಾ ಕುಳಿತಾಗ ಒಬ್ಬ ಹಿರಿಯರು ಬಂದು ಗ್ರಂಥಪಾಲಕ ಕಲ್ಲೇಶಿಗೆ ಕೇಳಿದರು. 'ಸರ್ ನಿನ್ನೆ ರಾತ್ರಿ ನನ್ನ ಚಪ್ಲಿ ಬೇರೆ ಯಾರೋ ಹಾಕಿಕೊಂಡು ಹೋಗಿದ್ದಾರೆ. ನಿಮಗೇನಾದರೂ ಗೊತ್ತಾ?' ಎಂದಾಗ ಕಲ್ಲೇಶಿಯು 'ನೋಡ್ರಿ, ನಿನ್ನೆ ರಾತ್ರಿ ಕರಂಟ್ ಬ್ಯಾರೆ ಹೋಗಿತ್ತು, ಯಾರಾದರೂ ಮರೆತು ಬದ್ಲಿಯಾಗಿ ಹಾಕಿಕೊಂಡು ಹೋಗಿರ್ಬೇಕು' ಎಂದರು. ಆದರೆ, ಆ ಹಿರಿಯ ವ್ಯಕ್ತಿ ಸುಮ್ಮನಾಗದೇ ವಟ ವಟ ಎನ್ನುತ್ತ ಏನನ್ನೊ ಬಡಬಡಿಸತೊಡಗಿದರು. ಅದು ಸಾಲದೆಂಬಂತೆ 'ರಾತ್ರಿ ಕರೆಂಟು ಹ್ವಾದಾಗ ಗ್ರಂಥಾಲಯದೊಳಗೆ ಒಂದಿಷ್ಟು ಬೆಳಕಿನ ವ್ಯವಸ್ಥೆ ನೀವು ಮಾಡಬೇಕ್ರಿ' ಎಂಬ ಉಪದೇಶದ ಮಾತನ್ನು ಹೇಳಿದಾಗ 'ಆಯಿತ್ರಿ ಹಿರ್‍ಯಾರ, ನಮ್ಮ ಮ್ಯಾಲಿನ ಸಾಹೇಬರಿಗೆ ನಿಮ್ಮ ವಿಚಾರ ತಿಳಿಸತೀನ್ರಿ... ಅವರು ಸ್ಯಾಂಕ್ಷನ್ ಮಾಡಿದ್ರ ನಾ ಬೆಳಕಿನ ವ್ಯವಸ್ಥಾ ಮಾಡ್ತೀನ್ರಿ' ಎಂದು ಸೌಮ್ಯವಾಗಿ ಮಾತಾಡಿ ಮಾತು ಮುಗಿಸಲೆತ್ನಿಸಿದರು. ಆದರೆ, ಆ ವ್ಯಕ್ತಿಯು ತನ್ನ ಜೋಡು ಎಗರಿಸಿಕೊಂಡು ಹೋದವರನ್ನು ನಿಂದಿಸುತ್ತಲೇ ಇದ್ದ. ಆಗ ಕಲ್ಲೇಶಿಯು